

# ಮೂರನೆಯ ಅರ್ಥ!



## ಸಮಾಜ ಮತ್ತು ಕಾಯ್ದೆಯ ದೃಷ್ಟಿಯಲ್ಲಿ ತೃತೀಯ ಲಿಂಗಿಗಳು

ಕಾಯ್ದೆ ಕಾನೂನು ಕೇವಲ ತಪ್ಪಿ ನಡೆದವರನ್ನು ಶಿಕ್ಷಿಸುವ ಉದ್ದೇಶದಿಂದ ಹುಟ್ಟಿಕೊಂಡವಲ್ಲ. ಸಮಾಜದಲ್ಲಿನ ತರತಮವನ್ನು ನಿವಾರಿಸುವ, ಎಲ್ಲ ಜನರಿಗೂ ಸಮಾನ ಹಕ್ಕುಗಳನ್ನು ನೀಡುವ, ಎಲ್ಲರ ಹಕ್ಕುಗಳನ್ನು ರಕ್ಷಿಸುವ ಒಂದು ಸುವ್ಯವಸ್ಥಿತ ಸಮಾಜವನ್ನು ನಿರ್ಮಿಸುವ ಉದ್ದೇಶವನ್ನು ಅವು ಹೊಂದಿವೆ. ನಮ್ಮ ಅಂತರಂಗದ ಬದಲಾವಣೆಗೂ ಪ್ರೇರಣೆ ನೀಡಿದಾಗಲಷ್ಟೇ ಕಾನೂನಿನ ಉದ್ದೇಶಗಳು ಸಾರ್ಥಕವಾಗುತ್ತವೆ. ಇದು ಸಾಧ್ಯವಾಗಬೇಕಾದರೆ ನಾವು ಕಾನೂನುಗಳನ್ನು ನಿರ್ಜೀವ ನಿಯಮಗಳಂತೆ ನೋಡುವುದನ್ನು ಬಿಡಬೇಕು. ಅದು ನಮ್ಮ ಬದುಕಿನೊಂದಿಗೆ ಸಾವಯವ ಸಂಬಂಧ ಹೊಂದಿದೆ ಎಂಬುದನ್ನು ಮನಗಾಣಬೇಕು. ಕಾನೂನನ್ನು ಬದುಕಿನ ಕಣ್ಣಿನಿಂದ ಕಾಣುವ ಈ ವಿಶ್ಲೇಷಣೆ, ಬದುಕಿನ ಅಗತ್ಯಗಳಿಗೆ ತಕ್ಕಂತೆ ಕಾನೂನೂ ಬದಲಾಗಬೇಕಾದ ಅಗತ್ಯವನ್ನು ಸೂಚಿಸುತ್ತದೆ.

■ ಸೌಮ್ಯಲಕ್ಷ್ಮೀ